ತೀರ್ಥಹಳ್ಳಿ ತಾಲ್ಲೂಕಿನಲ್ಲಿ ಸಣ್ಣ ನೀರಾವರಿ ಇಲಾಖೆಯ ವಿವಿಧ ಕಾಮಗಾರಿಗಳು

573:(3995)

ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ): ಮಾನ್ಯ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತೀರ್ಥಹಳ್ಳಿ ತಾಲ್ಲೂಕಿನಲ್ಲಿ ಸಣ್ಣ ನೀರಾವರಿ ಇಲಾಖೆಯಿಂದ ಮಂಜೂರಾಗಿರುವ ಕಾಮಗಾರಿಗಳು ಯಾವುವು; (ಆಯವ್ಯಯದಲ್ಲಿ ಸೇರಿದ್ದು)

ಆ) ಇವುಗಳಲ್ಲಿ 3: 1 ಭಾಗದಷ್ಟು ಹಣವಿರುವ ಕಾಮಗಾರಿಗಳು ಯಾವುವು; ಇವುಗಳು ಯಾವ ಸಾಲಿನಿಂದ ಮಂಜೂರಾಗಿವೆ?

ಇ) ಇವುಗಳಲ್ಲಿ ಕೆಲಸ ಆರಂಭಿಸಿರುವ ಕಾಮಗಾರಿಗಳು ಯಾವುವು?

ಈ) ವಿಳಂಬವಾಗಲು ಕಾರಣಗಳೇನು; ಯಾವಾಗ ಇವುಗಳ ಕಾಮಗಾರಿ ಆರಂಭಿಸಲಾಗುವುದು?

ಶ್ರೀ ತಿಪ್ಪೇಸ್ವಾಮಿ (ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು):

ಅ) 1997-98ನೇ ಸಾಲಿನಲ್ಲಿ 3 ಮತ್ತು 1998-99ನೇ ಸಾಲಿನಲ್ಲಿ 8 ಕಾಮಗಾರಿಗಳು ಆಯವ್ಯಯದಲ್ಲಿ ಮಂಜೂರಾಗಿವೆ. ವಿವರಗಳನ್ನು ಅನುಬಂಧ- 1ರಲ್ಲಿ ನೀಡಿದೆ.

ಆ) ಒಟ್ಟು 4 ಕಾಮಗಾರಿಗಳು, ಇವುಗಳ ವಿವರ ಅನುಬಂಧ- 1ರ ಕ್ರಮಾಂಕ 1,4,5, ಮತ್ತು 9ರಲ್ಲಿ ನೀಡಿದೆ.

ಇ) ಯಾವ ಕಾಮಗಾರಿಯನ್ನು ಆರಂಭಿಸಿಲ್ಲ.

ಈ) ಹಿಂದಿನ ಸಾಲಿನಲ್ಲಿ 1997-98ರ ಅಂದಾಜು ಮಂಜೂರಾತಿಗೆ ಬೇಕಾದ 1/3 ಭಾಗ ಅನುದಾನವು ಆಯವ್ಯಯದಲ್ಲಿ ಲಭ್ಯವಿರಲಿಲ್ಲ ಹಾಗೂ ಕೆಲವು ತಾಂತ್ರಿಕ ಮತ್ತು ಆಡಳಿತಾತ್ಮಕ ಅಡಚಣೆಗಳು ಇದ್ದವು. ಪ್ರಸಕ್ತ ಸಾಲಿನಲ್ಲಿ ಪ್ರಾರಂಭಿಸಲಾಗುವುದು.

Sl. No.	Name of work	Budget of 1997-98 Estimated cost	Budget of 1997-98 Budget provision	Budget of 1998-99 Estimated Cost	Budget of 1998-99 Budget Provision
1.	L.I.S. near Hosahalli from river Tunga	15.00	4.50*	106.00	31.80*
2.	L.I.S. near Balebailu	15.00	0.02	150.00	-
3.	Minugunda L.I.S	15.00	4.50*	28.00	1.40
4.	Renovation of breached tank at Bikshukere	-	-	16.60	5.00*
5.	Renovation of Konandur Doddakere	-	-	8.00	2.40*
6.	Renovation and Desilting of Yadagakere Yogi Malali	-	-	6.00	0.01
7.	Renovation of Totada Melinakere	-	-	6.00	0.01
8.	Repairs to Chikkakere bund	-	-	10.00	0.01
9.	L.I.S. at Dubbanagadda from Tunga River	-	-	30.00	9.00*
10.	Rejuvination of LIS at Mandagadde	-	-	8.00	0.01
11.	L.I.S. at Ingalagodi	-	-	15.00	0.01

* Words with 1/3 grants